# ಶ್ರೀಮಾತೆ ಶಾರದಾದೇವಿ

## (ಕೆಲವು ದೃಶ್ಯಾವಳಿಗಳು)

◆ ರಚನೆ: ಎಚ್.ವಿ. ಸರೋಜ

(ಹಿಂದಿನ ಸಂಚಿಕೆಯಿಂದ ಮುಂದುವರೆದುದು)

### ದೃಶ್ಯ ೧೨

[೧೮೮೬ ಆಗಸ್ಟ್ ೧೬ರಂದು ಶ್ರೀರಾಮಕೃಷ್ಣರ ದೇಹತ್ಯಾಗ ವಾಯಿತು. ಅನಂತರ ಶ್ರೀ ಮಾತೆಯವರು ಒಂದು ವರ್ಷದ ಕಾಲ ಯಾತ್ರೆ ಹೋಗಿದ್ದರು. ಅಲ್ಲಿಂದ ಬಂದು ತಿಂಗಳ ಕಾಲ ಕಾಮಾರಪುಕುರದಲ್ಲಿದ್ದರು. ಅಲ್ಲಿ ಅವರ ಸ್ಥಿತಿ ಬಹಳ ಬಡತನ ದ್ದಾಗಿತ್ತು. ಇದನ್ನು ಅರಿತ ಶ್ರೀರಾಮಕೃಷ್ಣರ ಅಂತರಂಗ ಶಿಷ್ಯರು ಅದರಲ್ಲೂ ಶ್ರೀಮತ್ ಸ್ವಾಮಿ ಶಾರದಾನಂದರು ಶ್ರೀಮಾತೆ ಯವರನ್ನು ಕೊಲ್ಕತಾದಲ್ಲಿ ತಮ್ಮ ಕಣ್ಣೆದುರಿಗೇ ಇರಿಸಿ ಕೊಳ್ಳ ಬೇಕೆಂಬ ಅಪೇಕ್ಷೆಯಿಂದ ಬಹಳ ಶ್ರಮ ಪಟ್ಟು 'ಉದ್ಬೋದನ' ಎಂಬ ಒಂದು ಕಟ್ಟಡವನ್ನು ಶ್ರೀಮಾತೆಯವರ ವಾಸಸ್ಥಾನಕ್ಕಾಗಿ ಮತ್ತು ತಮ್ಮ ಪತ್ರಿಕೆಯ ಕಚೇರಿಗಾಗಿ ಕಟ್ಟಿಸಿದರು. ಶ್ರೀಮಾತೆ ಕೊಲ್ಕತಾದಲ್ಲಿ ಇದ್ದಾಗಲೆಲ್ಲಾ ಅಲ್ಲೇ ಅವರ ವಾಸ. ಮಧ್ಯೆ ಮಧ್ಯೆ ಅವರು ತಮ್ಮಂದಿರ ಸಂಸಾರದ ಜವಾಬ್ದಾರಿಯನ್ನು ನಿರ್ವಹಿಸಲು ಆಗಾಗ್ಗೆ ಜಯರಾಂಬಾಟಿಗೂ ಹೋಗುತ್ತಿದ್ದರು. ಈ ದೃಶ್ಯದಲ್ಲಿ ಶಾರದಾದೇವಿಯವರು ಶ್ರೀರಾಮಕೃಷ್ಣರ ಅಣ್ಣನ ಮಗ ಶಿವ ರಾಮುವಿನ ಜೊತೆಗೆ ಕಾಮಾರಪುಕುರದಿಂದ ಜಯರಾಂ ಬಾಟಿಗೆ ಬರುತ್ತಿದ್ದಾರೆ. ಇದ್ದಕ್ಕಿದ್ದಂತೆ ಶಿವು ನಿಂತು ಬಿಡುತ್ತಾನೆ.]

**ಶಾರದಾದೇವಿ** : ಶಿವು, ಏಕೆ ಹೀಗೆ ನಿಂತುಬಿಟ್ಟೆ? ಬೇಗ ಬಾ, ಕತ್ತಲಾಗುತ್ತಿದೆ. ಬೇಗ ಊರು ಸೇರೋಣ.

**ಶಿವು** : ಅತ್ತೆ, ನೀನ್ಯಾರು ಅಂತ ಹೇಳು, ಆಗ ಬರುತ್ತೇನೆ.

**ಶಾರದಾದೇವಿ** : ನಾನ್ಯಾರು, ನಿಮ್ಮತ್ತೆ ಅಲ್ಲವೇನೋ? ಬಾರೋ.

**ಶಿವು** : ಹೋಗು, ಹೋಗು, ನಾನು ಬರುವುದಿಲ್ಲ. ನೀನೇ ಹೋಗು.

**ಶಾರದಾದೇವಿ** : ಯಾಕೋ, ನಾನೂ ನಿನ್ಹಾಗೆ ಒಬ್ಬ ಮನುಷ್ಯಳು ಕಣೋ, ಬಾರೋ.

**ಶಿವು** : ಸರಿ, ಹೋಗು, ನಾನು ಬರುವುದಿಲ್ಲ. ತೊಗೊ, ನಿನ್ನ ಗಂಟು.

**ಶಾರದಾದೇವಿ** : ಏನಪ್ಪ, ನಿನ್ನ ಹಠ, ಜನರು ನನ್ನನ್ನು ಭಗವತಿ, ಕಾಳಿ ಎನ್ನುತ್ತಾರೆ.

**ಶಿವು** : ಹಾಗಾದರೆ, ನೀನು ನಿಜವಾಗಿಯೂ ಕಾಳಿಯೇ, ಭಗವತಿಯೇ?

**ಶಾರದಾದೇವಿ** : ಹೌದು.

**ಶಿವು** : ಹಾ! ಹಾಗಾದರೆ, ನಡಿ, ಬರುತ್ತೇನೆ.

(ಶಿವು, ಶಾರದಾದೇವಿಯವರ ಕೈಹಿಡಿದು ಕುಣಿಯುತ್ತ ನಡೆಯುವನು.)

### ದೃಶ್ಯ ೧೩

**ಅಮ್‌ಜ್ಹಾದ್** : ಅಮ್ಮ.

**ಶಾರದಾದೇವಿ** : (ಒಳಗಿನಿಂದ) ಯಾರಪ್ಪ?

**ಅಮ್‌ಜಾದ್** : ನಾನಮ್ಮ, ಅಮ್‌ಜ್ಹಾದ್.

**ಶಾರದಾದೇವಿ** : (ಹೊರಗೆ ಬಂದು) ಹಾ! ಅಮ್‌ಜ್ಹಾದ್! ಬಂದೆಯಾ. ಇಷ್ಟು ದಿವಸ ಎಲ್ಲಿ ಹೋಗಿದ್ದೆಪ್ಪ?

**ಅಮ್‌ಜಾದ್** : (ತಲೆತಗ್ಗಿಸಿ) ಅಮ್ಮ, ಜೈಲಿನಲ್ಲಿ ಇದ್ದೆನಮ್ಮ.

**ಶಾರದಾದೇವಿ** : ಎಷ್ಟು ಸೊರಗಿಹೋಗಿದ್ದೀಯೆ, ಮಗು! ನಳಿನಿ, ಆ ಎಣ್ಣೆ ಸೀಸೆ ಮತ್ತು ಒಣಗಿಹಾಕಿರುವ ಪಂಚೆ ತಂದುಕೊಡು. ಹಾಗೆ ಆ ಕಾಗದದಲ್ಲಿರುವ ಸೀಗೆಪುಡಿ ಕೊಡು.

(ನಳಿನಿ ತರುವಳು) ಅಮ್‌ಜ್ಹಾದ್ ತೆಗೆದುಕೊ. ಹೋಗು ಕೊಳಕ್ಕೆ ಹೋಗಿ ತಲೆಗೆ ಮೈಗೆ ಚೆನ್ನಾಗಿ ಎಣ್ಣೆ ಹಚ್ಚಿ ಸ್ನಾನ ಮಾಡು. ನಂತರ ಈ ಪಂಚೆ ಉಟ್ಟುಕೊಂಡು ಊಟಕ್ಕೆ ಬಾ.

**ಅಮ್‌ಜಾದ್** : ಸರಿಯಮ್ಮ (ತೆಗೆದುಕೊಳ್ಳುವನು) (ಹೋಗುವನು)

**ನಳಿನಿ** : ಅಲ್ಲ, ಅತ್ತೆ, ಅವನು ಕಳ್ಳ, ಜೈಲಿಗೆ ಹೋಗಿ ಬಂದಿರು ವವನು. ಅವನಿಗೆ ನೀವು ಇಷ್ಟು ಪ್ರೀತಿ, ಸಲಿಗೆ ಕೊಟ್ಟಿದ್ದೀರಲ್ಲ. ಇದು ಸರಿಯೇ?

**ಶಾರದಾದೇವಿ** : ನಳಿನಿ, ಅವನ ಅಸಹಾಯಕ ಪರಿಸ್ಥಿತಿ ನಿನಗೇನು ಗೊತ್ತು? ಅವನು ರೇಷ್ಮೆ ಹುಳುಗಳನ್ನು ಸಾಕಿ, ಮರ್ಯಾದೆಯಿಂದ ಜೀವನ ಸಾಗಿಸುತ್ತಿದ್ದ. ಅದರೆ ಈ ಪಾಶ್ಚಾತ್ಯರ ಯಂತ್ರಕೈಗಾರಿಕೆಯಿಂದ ಇವರ ಉದ್ಯೋಗಕ್ಕೆ ಕಲ್ಲು ಬಿತ್ತು. ಬೇರೇನೂ ಕೆಲಸ ಇವರಿಗೆ ಬಾರದು. ಅವರು ತಮ್ಮ ಕುಟುಂಬವನ್ನು ಸಾಕಲು ಏನು ಮಾಡುತ್ತಾರೆ ಹೇಳು? ಆದ್ದ ರಿಂದಲೇ ಅವರು ಹೊಟ್ಟೆಪಾಡಿಗಾಗಿ ಈ ಕೆಲಸಕ್ಕೆ ಇಳಿದಿದ್ದಾರೆ. ಇನ್ನೇನು ಮಾಡುತ್ತಾರೆ, ಹೇಳು.

**ನಳಿನಿ** : ಸರಿ, ಸರಿ, ನಿನಗೆ ಹೇಳಿ ಏನು ಪ್ರಯೋಜನ? ನಿನಗೆ ಯಾರಲ್ಲಿಯೂ ತಪ್ಪೇ ಕಾಣದು.

**ಶಾರದಾದೇವಿ** : ಇರಲಿ ಬಿಡು. ಅದರಿಂದ ಯಾರಿಗೂ ನಷ್ಟ ವಿಲ್ಲ. ಪ್ರಪಂಚದಲ್ಲಿ ಎಲ್ಲರೂ ಇತರರಲ್ಲಿ ತಪ್ಪು ಕಾಣುವವರೇ. ಅಂತಹುದರಲ್ಲಿ, ನಾನೊಬ್ಬಳು ಆ ರೀತಿ ಇಲ್ಲ ಅಂದರೆ, ಪ್ರಪಂಚ ಏನೂ ಮುಳುಗಿಹೋಗುವುದಿಲ್ಲ.

**ನಳಿನಿ** : ಸರಿ, ಸರಿ, ಅಗೋ, ನೋಡು, ನಿನ್ನ ಮಗ ಬಂದ.

**ಶಾರದಾದೇವಿ** : ಅವನಿಗೆ ಸ್ವಲ್ಪ ಊಟ ಬಡಿಸು, ನಳಿನಿ.

**ನಳಿನಿ** : ಕುಳಿತುಕೋ. ಅಲ್ಲಿ.

(ನಳಿನಿ ಎಲೆಯನ್ನು ತಂದು ದೂರದಿಂದ ಅವನೆಡೆಗೆ ಎಸೆಯು ವಳು. ಊಟವನ್ನು ದೂರದಿಂದ ಬಡಿಸುವಳು)

**ಶಾರದಾದೇವಿ** : ಇದೇನು ನಳಿನಿ, ಈ ರೀತಿ ಬಡಿಸು

ತ್ತಿದ್ದೀಯೆ? ಈ ರೀತಿ ಬಡಿಸಿದರೆ ಅವನು ಉಣ್ಣುವುದು ಹೇಗೆ?

**ನಳಿನಿ** : ಅತ್ತೆ, ಅವನು ಮುಸಲ್ಮಾನ, ಅವನಿಗೆ ಹತ್ತಿರದಿಂದ ಬಡಿಸಲಾಗುತ್ತದೆಯೇ?

**ಶಾರದಾದೇವಿ** : ಸರಿ, ನೀನು ನಡಿ, ನಾನೇ ಬಡಿಸುತ್ತೇನೆ. (ಶಾರದಾದೇವಿಯವರು ಅವನ ಹತ್ತಿರ ಕೂತು ಅವನಿಗೆ ಪ್ರೀತಿಯಿಂದ ಬಡಿಸುತ್ತಿದ್ದಾರೆ.)

**ಶಾರದಾದೇವಿ** : ಹೊಟ್ಟೆ ತುಂಬಿತೇ ಮಗು?

**ಅಮ್‌ಜಾದ್** : ಅಮ್ಮ, ನೀವು ಬಡಿಸಿದರೆ ಹೊಟ್ಟೆ ತುಂಬದಿರುತ್ತದೆಯೇ. ಹೊಟ್ಟೆ, ಮನಸ್ಸು ಎಲ್ಲಾ ತೃಪ್ತಿಯಾಗಿಬಿಡುತ್ತದೆ. ಅಮ್ಮ, ಉಂಡಾಯಿತು. ಇನ್ನು ಬರುತ್ತೇನಮ್ಮ.

**ಶಾರದಾದೇವಿ** : ಹೋಗಿ ಬಾ, ಮಗು, ಮತ್ತೆ ಬೇಗ ಬಾ. (ಹೋಗುವವನು. ಶಾರದಾದೇವಿಯವರು ಅವನು ಊಟ ಮಾಡಿದ ಜಾಗವನ್ನು ಶುಚಿಮಾಡುತ್ತಿದ್ದಾರೆ. ನಳಿನಿ ಬರುತ್ತಾಳೆ.)

**ನಳಿನಿ**: ಅಯ್ಯೋ, ಇದೇನು ಅತ್ತೆ! ಅವನು ಮುಸಲ್ಮಾನ. ಅವನ ಎಂಜಲನ್ನು ನೀವು ತೆಗೆಯುತ್ತಿದ್ದೀರ. ನಿಮ್ಮ ಜಾತಿ ಹೋಯಿತು.

**ಶಾರದಾದೇವಿ** : ಏನು ಹೇಳುತ್ತಿ, ನಳಿನಿ, ಅಮ್‌ಜಾದ್ ನನ್ನ ಮಗ. ನನಗೆ ಶರತ್ ಹೇಗೋ, ಅಮ್‌ಜಾದ್ ಕೂಡ ಹಾಗೆ.

**ನಳಿನಿ** : ಹಾ! ಏನು? ಸ್ವಾಮಿ ಶಾರದಾನಂದರು ಈ ಕಳ್ಳ ಇಬ್ಬರೂ ಒಂದೇನೇ?

**ಶಾರದಾದೇವಿ** : ಹೌದು, ನನ್ನ ದೃಷ್ಟಿಯಲ್ಲಿ ಇಬ್ಬರೂ ನನ್ನ ಮಕ್ಕಳೇ. ಮಗು ಕೊಳಚೆಯಲ್ಲಿ ಬಿದ್ದು, ಮೈಯೆಲ್ಲಾ ಹೊಲಸು ಮಾಡಿಕೊಂಡರೆ, ತಾಯಿ, ಅದನ್ನು ದೂರಮಾಡುವಳೇ? ಮಗುವನ್ನು ಶುಚಿ ಮಾಡಿ ಸ್ವೀಕರಿಸುತ್ತಾಳೆ.

**ನಳಿನಿ** : ಹೂಂ ಸರಿ, ಸರಿ.

### ದೃಶ್ಯ ೧೪

[ಆಧ್ಯಾತ್ಮಿಕ ಸಾಕ್ಷಾತ್ಕಾರದ ನಂತರ, ರಾಮಕೃಷ್ಣರ ದೇಹತ್ಯಾಗವಾದ ಮೇಲೆ, ನರೇಂದ್ರ ಪರಿವ್ರಾಜಕನಾಗಿ ಭಾರತವನ್ನೆಲ್ಲಾ ಸುತ್ತಲು ಹೊರಟಿದ್ದಾನೆ. ಅದಕ್ಕೆ ಮೊದಲು ಮಾತೆಯವರ ಆಶೀರ್ವಾದ ಪಡೆಯಲು ಬಂದಿದ್ದಾನೆ]

**ಶಾರದಾದೇವಿ** : ಬಾ, ನರೇನ್. ಕುಳಿತುಕೋ.

(ನರೇಂದ್ರ ನಮಸ್ಕರಿಸುವನು)

**ಶಾರದಾದೇವಿ** : ಹೇಗಿದ್ದೀಯೆ, ಮಗು?

**ನರೇಂದ್ರ** : ನಿಮ್ಮ ಆಶೀರ್ವಾದದಿಂದ ಚೆನ್ನಾಗಿದ್ದೇನಮ್ಮ.

**ಶಾರದಾದೇವಿ** : ನರೇನ್, ನಿನ್ನ ಹಾಡು ಕೇಳಿ ಯಾವ ಕಾಲವಾಯಿತಪ್ಪ. ಎಲ್ಲಿ ಒಂದು ಹಾಡು ಹೇಳು. ಕೇಳೋಣ. (ಹಾಡುವನು.)

**ನರೇಂದ್ರ** : ಅಮ್ಮ, ನಾನಿನ್ನು ಬರುತ್ತೇನಮ್ಮ.

**ಶಾರದಾದೇವಿ** : ಏಕೆ ಮಗು, ನೀನೇನೋ ಹೇಳಬೇಕು ಅಂತಿರುವಂತಿದೆ. ಸಂಕೋಚವಿಲ್ಲದೆ ಹೇಳು ಮಗು.

**ನರೇಂದ್ರ** : ಅಮ್ಮ, ನಾನು ಪರಿವ್ರಾಜಕನಾಗಿ, ಭಾರತವನ್ನೆಲ್ಲಾ ಸುತ್ತಬೇಕೆಂದಿದ್ದೇನೆ. ನಾನು ನಿಜವಾದ ಮನುಷ್ಯನಾಗುವುದಕ್ಕೆ ಸಾಧ್ಯವಾದರೆ ಮಾತ್ರ ಹಿಂದಿರುಗಿಬರುತ್ತೇನೆ. ಇಲ್ಲದಿದ್ದರೆ, ಇದೇ ನನ್ನ ಕೊನೆಯ ಪ್ರಣಾಮ ನಿಮಗೆ.

**ಶಾರದಾದೇವಿ** : ಇದೇನು ಮಗು, ನೀನು ಹೇಳುತ್ತಿರುವುದು? ಹೀಗೇಕೆ ಹೇಳುತ್ತಿದ್ದೀಯೆ?

**ನರೇಂದ್ರ** : ಇಲ್ಲಮ್ಮ, ನೀವು ವ್ಯಾಕುಲ ಪಡಬೇಡಿ. ನಿಮ್ಮ ಕೃಪಾಶೀರ್ವಾದದಿಂದ ನನ್ನ ಇಚ್ಛೆ ಪೂರ್ಣವಾಗಿ ಶೀಘ್ರದಲ್ಲಿಯೇ ಹಿಂದಿರುಗಿ ಬಂದುಬಿಡುತ್ತೇನೆ.

**ಶಾರದಾದೇವಿ** : ಆಗಲಿ ಮಗು, ನಿನ್ನ ಇಚ್ಛೆ ಪೂರ್ಣವಾಗಲಿ. ಆರೋಗ್ಯವನ್ನು ಜೋಪಾನವಾಗಿ ನೋಡಿಕೋ ಮಗು.

**ನರೇಂದ್ರ** : ಆಗಲಮ್ಮ, ಬರುತ್ತೇನೆ.

### ದೃಶ್ಯ ೧೫

**ಶಿಷ್ಯ** : ಅಮ್ಮ, ಸ್ವಾಮೀಜಿಯಿಂದ ಪತ್ರ ಬಂದಿದೆ.

**ಶಾರದಾದೇವಿ** : ಹೌದೆ, ನನ್ನ ನರೇನ್‌ನಿಂದ ಪತ್ರ ಬಂದಿದೆಯೆ? ಓದಿ ಹೇಳು ಮಗು, ಏನು ಬರೆದಿದ್ದಾನೆ ಅಂತ.

**ಶಿಷ್ಯ** : (ಓದಿ) ಅಮ್ಮ, ನರೇಂದ್ರ ಅಮೆರಿಕ ಖಂಡದಲ್ಲಿ ಚಿಕಾಗೋ ನಗರದಲ್ಲಿ ನಡೆಯುವ ವಿಶ್ವಧರ್ಮ ಸಮ್ಮೇಳನಕ್ಕೆ ಹಿಂದೂ ಪ್ರತಿನಿಧಿಯಾಗಿ ಹೋಗಿ ಬರುವರಂತೆ. ಅದಕ್ಕೆ ತಮ್ಮ ಅಭಿಪ್ರಾಯ, ಆಶೀರ್ವಾದ ಬೇಡಿದ್ದಾರೆ. ಸಮಯ ಬಹಳ ಸ್ವಲ್ಪ ಉಳಿದಿರುವುದರಿಂದ ಅವರೇ ಸ್ವತಃ ತಮ್ಮನ್ನು ನೋಡಲು ಬರಲಾಗಲಿಲ್ಲವಂತೆ.

**ಶಾರದಾದೇವಿ** : ಹೌದೆ? (ಯೋಚಿಸಿ) ಹ್ಹಾ! ಈಗ ನನಗರ್ಥವಾಯಿತು.

**ಶಿಷ್ಯ** : ಏನಮ್ಮ?

**ಶಾರದಾದೇವಿ** : ಅಂದು ನನಗೊಂದು ದರ್ಶನವಾಗಿತ್ತು. ಅದರ ಅರ್ಥ ಇಂದು ನನಗೆ ಪರಿಪೂರ್ಣವಾಯಿತು.

**ಶಿಷ್ಯ** : ಏನಮ್ಮ, ಅದು?

**ಶಾರದಾದೇವಿ**: ಅಂದು ಹುಣ್ಣಿಮೆಯ ರಾತ್ರಿ. ಹಾಲು ಚೆಲ್ಲಿದಂತೆ ಬೆಳದಿಂಗಳು ಹರಡಿದೆ. ಗಂಗೆ ಕಲಕಲ ನಾದದಿಂದ ಹರಿಯುತ್ತಿದ್ದಾಳೆ. ಚಂದ್ರಬಿಂಬ ಗಂಗೆಯ ನೀರಿನಲ್ಲಿ ಪ್ರತಿಬಿಂಬಿತವಾಗಿದೆ. ನಾನು ಅಲ್ಲಿ ಸೋಪಾನದ ಮೇಲೆ ಕುಳಿತು ಈ ಅಪೂರ್ವ ದೃಶ್ಯದ ಆನಂದವನ್ನು ಅನುಭವಿಸುತ್ತಿದ್ದೇನೆ. ಆಗ ಇದ್ದಕ್ಕಿದ್ದಂತೆ ಶ್ರೀರಾಮಕೃಷ್ಣರು ಕಾಣಿಸಿಕೊಂಡರು. ಬೇಗ ಬೇಗ ನಡೆದು ಗಂಗಾನದಿಯಲ್ಲಿ ಇಳಿದರು. ನೋಡು ನೋಡುತ್ತಿದ್ದಂತೆ ಅವರ ದೇಹ ಗಂಗಾನದಿಯಲ್ಲಿ ಕರಗಿತು. ಅದನ್ನು ನೋಡಿ ನನಗೆ ರೋಮಾಂಚನವಾಯಿತು. ಆಗ ಇದ್ದಕ್ಕಿದ್ದಂತೆ ನರೇಂದ್ರ ಪ್ರತ್ಯಕ್ಷನಾದ. 'ಜೈ ರಾಮಕೃಷ್ಣ' ಎನ್ನುತ್ತ ಅವನು ಗಂಗಾಜಲವನ್ನು ಎರಡು ಕೈಗಳಿಂದಲೂ ತೆಗೆದು ಅಲ್ಲಿದ್ದ ಅಸಂಖ್ಯ ಜನಕೋಟಿಯ ಮೇಲೆ ಪ್ರೋಕ್ಷಿಸತೊಡಗಿದ. ಆ ನೀರಿನ ಸ್ಪರ್ಶದಿಂದ ಜನ ಮುಕ್ತರಾಗುತ್ತಿರುವುದನ್ನು ಕಂಡೆ. ಈಗ ನನಗೆ ಅರ್ಥವಾಗುತ್ತಿದೆ. ಗುರುದೇವರ ಸಂದೇಶವನ್ನು ಜಗತ್ತಿಗೆ ಸಾರುವುದಕ್ಕೆ ಈ ಒಂದು ಸಮ್ಮೇಳನ ಜರುಗುತ್ತಿದೆ. ಖಂಡಿತ ಅವನಿಗೆ ಅಲ್ಲಿಗೆ ಹೋಗುವುದಕ್ಕೆ ಬರೆ, ಮಗು.

**ಶಿಷ್ಯ** : ಆಯಿತಮ್ಮ. (ಮುಗಿಯಿತು)

**ಜೈ ಶ್ರೀಮಾತಾ**